ಓ.ಎಸ್‌ಃ ೨೬೮/೨೦೧೯

ಡಿ. ಡಬ್ಲ್ಯೂ ಃ 01

<u>ಸಾಕ್ಷಿಗೆ ದಿನಾಂಕ **12.11.2025** ರಂದು ಪ್ರಮಾಣ ವಚನ ನೀಡಲಾಯಿತು.</u>

<u>ಪಾಟೀಸವಾಲುಃ ವಾದಿ ಪರ ವಕೀಲರಿಂದ</u>

ನನಗೆ ಈ ದಾವೆಯ ವಸ್ತುಸಂಗತಿ ತಿಳಿದಿರುತ್ತದೆ. ಈ ದಾವೆಯಲ್ಲಿ ನಮ್ಮ ಕಂಪನಿಯ ಪರವಾಗಿ ನಾನು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ, ಕಂಪನಿಯ ವ್ಯವಸ್ಥಾಪಕರು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ. ನನಗೆ ವಿಚಾರಣೆಗೆ ಹಾಜರಾಗಲು ಮತ್ತು ದಾಖಲಾತಿ ಒದಗಿಸಲು ಅಧಿಕಾರ ಪತ್ರ ನೀಡಿರುತ್ತಾರೆ. ನಮ್ಮ ಕಂಪನಿಯಿಂದ ಓ.ಎಸ್. ನಂ.34/1998 ರಂತೆ ಸಾಲದ ಹಣ ವಸೂಲಾತಿಗಾಗಿ ವಾದಿಯ ತಂದೆಯ ವಿರುದ್ಧ ದಾಖಲಿಸಿರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತನ್ನು ವಾದಿಯ ತಂದೆ ಸಾಲದ ಹಣಕ್ಕಾಗಿ ಅಡಮಾನ ಮಾಡಿರಲಿಲ್ಲ. ದಾವಾ ಸ್ವತ್ತು ಅಸಲು ದಾವೆ ಸಂಖ್ಯೆ 34/1998 ಚಾಲ್ತಿಯಲ್ಲಿದ್ದಾಗ 1 ನೇ ವಾದಿಯ ತಾಯಿಯ ಹೆಸರಿನಲ್ಲಿತ್ತು. ಆ ಸಂದರ್ಭದಲ್ಲಿ ಸದರಿ ಸ್ವತ್ತು ಸರ್ಕಾರಿ ಬೀಳು ಎಂದು ಆದೇಶವಿತ್ತು ಎಂದರೆ ಸರಿ. ದಾವಾ ಸ್ವತ್ತು ಅಸಲು ದಾವೆ ಸಂಖ್ಯೆ 34/1998 ಸಲ್ಲಿಸುವ ಕಾಲಕ್ಕೆ ವಾದಿಯರ ತಾಯಿ ಗುಣವತಿ ಹೆಸರಿನಲ್ಲಿ ಮೈನರ್ ಮಕ್ಕಳ ಪ್ರತಿನಿಧಿಯಾಗಿ ಇತ್ತು ಎಂದರೆ ಸರಿ. ಸಾಕ್ಷಿಗೆ 1997-98 ರ ಸರ್ವೆ ನಂ.16 ಪೈಕಿ-ಪಿ1 ರ ಪಹಣಿಯ ನಕಲನ್ನು ತೋರಿಸಲಾಗಿ ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿಯನ್ನು ನಿಪಿ 7 ಎಂದು ಗುರುತಿಸಲಾಯಿತು. ದಾವಾ ಸ್ವತ್ತು ಮೈನರ್ ಮಕ್ಕಳ ಹೆಸರಿನಲ್ಲಿದ್ದು ಮೈನರ್ ಆಗಿರುತ್ತಾರೆಂದು ನ್ಯಾ.ದ ಗಮನಕ್ಕೆ ತರಬೇಕಾಗಿದ್ದು ನನ್ನ ಕರ್ತವ್ಯ ಎಂದರೆ ಸರಿಯಲ್ಲ, ಅದು ವಾದಿಗಳ ಕರ್ತವ್ಯವಾಗಿರುತ್ತದೆ. ದಾವಾ ಸ್ವತ್ತು ನ್ಯಾ.ದ ಹರಾಜಿನ ಮೂಲಕ ಪಡೆದುಕೊಳ್ಳುವ ಸಂದರ್ಭದಲ್ಲಿ ವಾದಿಗಳು ಅಪ್ರಾಪ್ತರಾಗಿದ್ದು ನ್ಯಾ.ದ ಗಮನಕ್ಕೆ ತರದೆ ದಾವಾ ಸ್ವತ್ತನ್ನು ಹರಾಜಿನ ಮೂಲಕ ಖರೀದಿಸಿರುವುದು ಕಾನೂನು ಸಮ್ಮತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ವಾದಿಗಳು

ಅಪ್ರಾಪ್ತರಾಗಿದ್ದು ಅವರ ಶ್ರೇಯೋಭಿವೃದ್ಧಿಗಾಗಿ ಸಾಲ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನಾನು ನನ್ನ ಪ್ರಮಾಣ ಪತ್ರ ಮತ್ತು ಪ್ರತಿವಾದ ಪತ್ರದಲ್ಲಿ ವಾದಿಗಳ ತಂದೆ ಗೋಪಾಲಸ್ವಾಮಿ ನಮ್ಮ ಕಂಪನಿಯಿಂದ ಮಧ್ಯವನ್ನು ಸಗಟಾಗಿ ಖರೀದಿಸುತ್ತಿದ್ದು ಸದರಿ ಖರೀದಿ ಸಂಬಂಧ ಉಳಿಸಿಕೊಂಡಿದ್ದ ಬೇ.ಬಾಕಿಗಾಗಿ ದಾವೆ ದಾಖಲಿಸಿರುತ್ತೇವೆ ಎಂದು ಹೇಳಿರುತ್ತೇವೆ ಎಂದರೆ ಸರಿ. ನಮ್ಮ ಕಂಪನಿಯಿಂದ ವಾದಿಯರ ತಂದೆ ಪಾವತಿಸಬೇಕಿದ್ದ ಬೇ.ಬಾಕಿಯನ್ನು ಇಂದಿನವರೆಗೂ ಬಡ್ಡಿಯ ಸಮೇತ ಪಾವತಿಸಲು ಸಿದ್ಧರಿದ್ದು ಕಂಪನಿಯಿಂದ ದಾವಾ ಸ್ವತ್ತನ್ನು ಹಿಂಪಡೆಯಲು ಸಿದ್ಧರಿರುತ್ತಾರೆ ಎಂದರೆ ಸರಿಯಲ್ಲ, ತೀರ್ಪಾಗಿ ಪರಿಗಣಿಸುವುದು ನ್ಯಾ.ಕ್ಕೆ ಬಿಟ್ಟ ವಿಷಯವಾಗಿರುತ್ತದೆ. ದಾವಾ ಸ್ವತ್ತಿನಲ್ಲಿ ವಾದಿಗಳು ಸ್ವಾಧೀನಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಕಂಪನಿ ಸ್ವಾಧೀನದಲ್ಲಿದ್ದು ಭತ್ತ ಬೆಳೆಯುತ್ತೇವೆ ಎಂದು ನುಡಿಯುತ್ತಾರೆ. ನಾನು ನಮ್ಮ ಕಂಪನಿ ಸ್ವಾಧೀನದಲ್ಲಿ ಇಲ್ಲದೆ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಪರ ವಕೀಲರು ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಾಕಾಶ ಕೋರಿದ್ದು ವಾದಪತ್ರದಲ್ಲಿನ ತಮ್ಮ ನಿಲುವುಗಳಿಗೆ ಸಂಬಂಧಿಸಿದಂತೆ ಎಲ್ಲಾ ಅಗತ್ಯ ಪ್ರಶ್ನೆಗಳನ್ನು ಕೇಳಲಾಗಿದ್ದು ಮುಂದುವರೆದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ